ಇನ್ನು ಕಾಮಗಾರಿ ಮುಗಿಯದೆ ಉದ್ಘಾಟನೆ ಕೆಲಸ ಕೂಡ ಆಗಿಲ್ಲ. ಸದರಿ ಕಾಮಗಾರಿಗಳನ್ನು ಮುಗಿಸುವುದಕ್ಕೆ ಇನ್ನು ಎರಡು-ಮೂರು ತಿಂಗಳಾದರು ಬೇಕಾಗುತ್ತದೆ. ಆದರೆ, ಹಂತ ಹಂತದಲ್ಲಿ ಒಂದಲ್ಲೊಂದು ಸಮಸ್ಯೆ ಅಲ್ಲಿ ಬರುತ್ತಿದೆ. ಆದ್ದರಿಂದ ಈ ಒಂದು ಹಿನ್ನೆಲೆಯಲ್ಲಿ ಇದನ್ನು ನಿವಾರಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

**ಡಾ: ಎ.ಬಿ. ಮಾಲಕರೆಡ್ಡಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್‌ರವರ ಜೊತೆ ಸ್ಥಳಕ್ಕೆ ಹೋಗಿ ನಾನೂ ಸಹ ಕಾಮಗಾರಿಯನ್ನು ಪರಿಶೀಲನೆ ಮಾಡಿದ್ದೇನೆ. ಈ ಪ್ರಾಜೆಕ್ಟ್ ನನ್ನ ಮಿತ್ರರಾದ ಮಾನ್ಯ ಕಾಗೋಡು ತಿಮ್ಮಪ್ಪನವರ ಕೈಗೆ ಬರುವುದರಿಂದ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿಸಬೇಕೆಂದು ಅವರಿಗೂ ಕೂಡ ನಾನು ಹೇಳುತ್ತೇನೆ. ತ್ವರಿತಗತಿಯಲ್ಲಿ ಸದರಿ ಕೆಲಸವನ್ನು ಎಷ್ಟು ಬೇಗ ಮಾಡಿಸುವುದಕ್ಕೆ ಸಾಧ್ಯವಿದೆಯೋ ಅಷ್ಟು ಬೇಗ ಮಾಡಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಅಧ್ಯಕ್ಷರು** : ಮುಂದಿನ ಪ್ರಶ್ನೆಯನ್ನು ಮಾನ್ಯ ಹೆಚ್.ಎಸ್. ಶಂಕರಲಿಂಗೇಗೌಡರು ಕೇಳಿ. ಇವರು ಬೆಳಿಗ್ಗೆ ಇಲ್ಲಿಯೇ ಇದ್ದರು. ಆದರೆ, ಈಗ ಇಲ್ಲಿಲ್ಲ. ಮುಂದಿನ ಪ್ರಶ್ನೆಯನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಕೇಳಿ.

**ರಾಜ್ಯದಲ್ಲಿ ಕಾಣಿಸಿಕೊಂಡಿರುವ ಡೆಂಗ್ಯೂಜ್ವರವನ್ನು ಹತೋಟಿಯಲ್ಲಿಡುವ ಬಗ್ಗೆ**

530 (4519) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತ್ತೆ ಡೆಂಗ್ಯೂ ಜ್ವರ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂಧಿದ್ದರೆ, ಯಾವ ಯಾವ ಜಿಲ್ಲೆಗಳಲ್ಲಿ ಈ ಜ್ವರ ಕಾಣಿಸಿಕೊಂಡಿದೆ. ಜಿಲ್ಲಾವಾರು ವಿವರ ನೀಡಿ.

ಆ) ಈವರೆವಿಗೂ ಈ ಜ್ವರಕ್ಕೆ ಪೀಡಿತರಾದವರ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು.

ಇ) ಜ್ವರವನ್ನು ಹತೋಟಿಯಲ್ಲಿಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಉ) ಈ ರೋಗದ ವಿಷಯದಲ್ಲಿ ನಾಗರೀಕರಿಗೆ ಯಾವ ರೀತಿಯಲ್ಲಿ ತಿಳುವಳಿಕೆಯನ್ನು ನೀಡಲಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಡೆಂಗ್ಯೂ ಜ್ವರವು 2003ನೇ ಸಾಲಿನಲ್ಲಿ ರಾಜ್ಯದ 14 ಜಿಲ್ಲೆಗಳಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಕಾಣಿಸಿಕೊಂಡಿರುತ್ತದೆ.

ಆ) 2003ನೇ ಸಾಲಿನಲ್ಲಿ ಜನವರಿಯಿಂದ ಇಲ್ಲಿಯವರೆಗೆ ವರದಿಯಾಗಿರುವ ಡೆಂಗ್ಯೂ ಪ್ರಕರಣಗಳ ಜಿಲ್ಲಾವಾರು ವಿವರ ಹೀಗಿದೆ.

| ಜಿಲ್ಲೆ | ಡೆಂಗ್ಯೂ ಪ್ರಕರಣಗಳು |
|---|---|
| ಬೆಂಗಳೂರು (ನಗರ) ಜಿಲ್ಲೆ | 30 |
| ಬೆಂಗಳೂರು ನಗರ | 101 |

| | |
|---|---|
| ಬೆಳಗಾಂ | 1 |
| ದಕ್ಷಿಣ ಕನ್ನಡ | 50 |
| ಮಂಡ್ಯ | 49 |
| ತುಮಕೂರು | 10 |
| ಚಿಕ್ಕಮಗಳೂರು | 1 |
| ಧಾರವಾಡ | 2 |
| ಬೆಂಗಳೂರು (ಗ್ರಾ) | 38 |
| ಕೋಲಾರ | 105 |
| ದಾವಣಗೆರೆ | 1 |
| ಕೊಡಗು | 5 |
| ಮೈಸೂರು | 24 |
| ರಾಯಚೂರು | 1 |
| ಚಾಮರಾಜನಗರ | 6 |
| ಒಟ್ಟು | 424 |

ಉಳಿದ 13 ಜಿಲ್ಲೆಗಳಲ್ಲಿ ಈ ರೋಗವು ವರದಿಯಾಗಿಲ್ಲ.

ಇ) ಡೆಂಗ್ಯೂ ಜ್ವರ ನಿಯಂತ್ರಣಕ್ಕಾಗಿ ರಾಜ್ಯದ್ಯಂತ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಎಲ್ಲಾ ಜಿಲ್ಲೆಗಳಿಗೂ ಮುಂಜಾಗ್ರತಾ ಕ್ರಮವಾಗಿ ಡೆಂಗಿ ಜ್ವರ ತಡೆಗಟ್ಟುವ ನಿಯಂತ್ರಣ ಕ್ರಮಗಳಿಗೆ ಸನ್ನದ್ದರಾಗಿರುವಂತೆ ಮುನ್ಸಾಚನಾ ಸುತ್ತೋಲೆಗಳನ್ನು ಕಳುಹಿಸಿ ಎಚ್ಚರಿಸಲಾಯಿತು.

2. ಜ್ವರ ಪೀಡಿತರಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ ರಾಷ್ಟ್ರೀಯ ವೈರಾಣು ಸಂಸ್ಥೆ ಬೆಂಗಳೂರು ಇಲ್ಲಿಗೆ ಡೆಂಗ್ಯೂ ಜ್ವರ ಪರೀಕ್ಷೆಗಾಗಿ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿದೆ.

3. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿನ ಚಿಕಿತ್ಸಾಲಯಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ : ಆಸ್ಪತ್ರೆಗಳಲ್ಲಿ ಡೆಂಗ್ಯೂ ಜ್ವರ : ಡೆಂಗ್ಯೂ ರಕ್ತಸ್ರಾವ ಜ್ವರ ಪ್ರಕರಣಗಳಿಗೆ ತುರ್ತಾಗಿ ಬೇಕಾಗಿರುವ ನಿರ್ವಹಣಾ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.

4. ಡೆಂಗ್ಯೂ ಜ್ವರ ತಲೆದೋರಿದ ಪ್ರದೇಶಗಳಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

5. ಡೆಂಗ್ಯೂ ಜ್ವರ ಹರಡಿರುವ ಪ್ರದೇಶಗಳಲ್ಲಿ, ಕೀಟನಾಶಕದ ಭೂಮೀಕರಣ ಕೈಗೊಂಡು ಸೋಂಕು ಹರಡುವ ಸೊಳ್ಳೆಗಳನ್ನು ನಾಶಪಡಿಸಲಾಗುತ್ತಿದೆ.

ಉ) 1. ಆರೋಗ್ಯ ಶಿಕ್ಷಣಕ್ಕಾಗಿ ವಿಶೇಷ ಭಿತ್ತಿ ಪತ್ರಗಳನ್ನು ಕಿರುಹೊತ್ತಿಗೆಗಳನ್ನು ಮುದ್ರಿಸಿ ಹಂಚಲಾಗಿದೆ. ದಿನಪತ್ರಿಕೆಗಳಲ್ಲಿ ಈ ರೋಗದ ನಿಯಂತ್ರಣ ಕ್ರಮಗಳ ಬಗ್ಗೆ ಹಾಗೂ ಇದರಲ್ಲಿ ಜನತೆಯ ಪಾತ್ರದ ಬಗ್ಗೆ ಜಾಹಿರಾತುಗಳನ್ನು ನೀಡಲಾಗುತ್ತಿದೆ.

2. ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಕಾರ್ಯಕರ್ತರ ಸಹಾಯದಿಂದ ಮತ್ತು ಜಿಲ್ಲಾ ಕೀಟ ಶಾಸ್ತ್ರಜ್ಞರಿಂದ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಪ್ರತಿ ಮನೆಗೂ ಭೇಟಿ ನೀಡಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಕಾರಣಗಳನ್ನು ಜನರಿಗೆ ಪ್ರತ್ಯಕ್ಷವಾಗಿ ತೋರಿಸಿ ಅವುಗಳ ನಿರ್ಮೂಲನೆಗಾಗಿ ಕ್ರಮ

ಕೈಗೊಳ್ಳಲಾಗುತ್ತಿದೆ ಹಾಗೂ ಮನೆಯ ಒಳಗೆ ಮತ್ತು ಸುತ್ತ ಮುತ್ತ ತ್ಯಾಜ್ಯ ವಸ್ತುಗಳನ್ನು ನಾಶಪಡಿಸಿ ನೈರ್ಮಲ್ಯ ಕಾಪಾಡಲು ಕೋರಲಾಗುತ್ತಿದೆ.

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಅಧ್ಯಕ್ಷರೆ, ಡೆಂಗ್ಯೂ ಜ್ವರಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇವತ್ತಿನ ದಿವಸ ಡೆಂಗ್ಯೂ ಜ್ವರದಿಂದ ರಾಜ್ಯದಲ್ಲಿ ಬೇರೆ ಬೇರೆ ಭಾಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಆಸ್ಪತ್ರೆ ಸೇರುತ್ತಿದ್ದಾರೆ. ಮತ್ತೆ ಬೆಂಗಳೂರಿನಲ್ಲಿ ಈ ಒಂದು ಕಾಯಿಲೆಗೆ ಇಬ್ಬರು ರೋಗಿಗಳು ತುತ್ತಾಗಿ ಮೃತಪಟ್ಟಿರತಕ್ಕಂಥ ಮಾಹಿತಿ ಬಂದಿದೆ. ಮಂಗಳೂರು ಜಿಲ್ಲೆಯಲ್ಲಿ ಸೂಳ್ಯ ಮತ್ತು ಅರಂತೋಡು ಭಾಗಗಳಲ್ಲಿ ಹಾಗೂ ತಲಕಾಡು ಭಾಗದಲ್ಲಿ ಮತ್ತು ಮಂಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಡೆಂಗ್ಯೂ ಜ್ವರ ಬಂದಿರತಕ್ಕಂಥದ್ದು ಗಮನಕ್ಕೆ ಬಂದಿದೆ. ಮತ್ತೆ ಪ್ರಮುಖವಾಗಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ಸುಮಾರು ಸಾವಿರ ಮಂದಿಗೆ ಈ ಒಂದು ಜ್ವರ ಬಂದಿದೆ. ಈ ಜ್ವರದಿಂದ ಬಳಲುತ್ತಿರುವ ರೋಗಿಗಳಿಗೆ ಯಾವ ರೀತಿಯಲ್ಲಿ ಆರೈಕೆ ಮಾಡುತ್ತಿದ್ದೀರಿ ಎನ್ನತಕ್ಕಂಥದ್ದು ಮತ್ತು ಇದನ್ನು ತಡೆಗಟ್ಟುವುದಕ್ಕೆ ಏನೇನು ಪ್ರಿಕಾಷನ್ ತೆಗೆದು ಕೊಂಡಿದ್ದೀರಿ ಎನ್ನತಕ್ಕಂಥದ್ದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಜ್ವರ ಬರುವುದಕ್ಕೆ ಸೂಳ್ಳೆಗಳೇ ಮುಖ್ಯ ಕಾರಣವಾಗಿದೆ. ಆದ್ದರಿಂದ ಈ ಸೊಳ್ಳೆಗಳನ್ನು ನಿಯಂತ್ರಣ ಮಾಡುವುದಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳತಕ್ಕಂಥದ್ದು ಇವತ್ತಿನ ದಿವಸ ಬಹಳ ಮುಖ್ಯವಾಗಿದೆ. ಆದರೆ, ಈ ಕೆಲಸ ಪ್ರಾಕ್ಟಿಕಲ್ ಆಗಿ ಫೀಲ್ಡ್‌ನಲ್ಲಿ ಆಗುತ್ತಿಲ್ಲ. ಇವತ್ತಿನ ದಿವಸ ನೀರು ಒಂದೇ ಕಡೆ ನಿಂತುಕೊಂಡಿರುವ ಜಾಗದಲ್ಲಿ ಮತ್ತು ಗಲೀಜು ನೀರು ಇರುವ ಕಡೆ ಈ ಸೊಳ್ಳೆಗಳ ಸಂತತಿ ಬೆಳೆಯುತ್ತದೆ. ಇದರಿಂದ ಈ ಡೆಂಗ್ಯೂ ಜ್ವರ ಬರುವುದಕ್ಕೆ ಮೂಲಭೂತವಾದ ಕಾರಣವಾಗಿದೆ. ಕಾರ್ಪೊರೇಷನ್ ಮೂಲಕ ಸೊಳ್ಳೆಗಳಿಗೆ ಔಷಧಿಗಳನ್ನು ಸಿಂಪಡಿಸತಕ್ಕಂಥ ಕೆಲಸವನ್ನು ಹಾಗು ಸೊಳ್ಳೆಗಳನ್ನು ನಿಯಂತ್ರಣ ಮಾಡತಕ್ಕಂಥ ಕೆಲಸವನ್ನು ಮಾಡಲಾಗುತ್ತಿದೆ ಎಂದು ತಾವು ಹೇಳಿದ್ದೀರಿ. ಆದರೆ, ಇದಕ್ಕೆ ಹೆಚ್ಚಿನ ಪ್ರಿಕಾಷನ್ ತೆಗೆದುಕೊಳ್ಳುತ್ತಿಲ್ಲ. ಇವತ್ತಿನ ದಿವಸ ಇದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಿದ್ದರೂ ಕೂಡ ಇದು ಸರಿಯಾದ ರೀತಿಯಲ್ಲಿ ಅನುಷ್ಠಾನವಾಗುತ್ತಿಲ್ಲ. ಈ ಒಂದು ಕಾರಣದಿಂದ ಈ ಡೆಂಗ್ಯೂ ಜ್ವರ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ಕಾರಣವಾಗಿದೆ. ಆದ್ದರಿಂದ ಈ ಡೆಂಗ್ಯೂ ಜ್ವರ ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಏನು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥದ್ದನ್ನು ತಿಳಿಸಬೇಕು. ಮತ್ತೆ ತಾವೂ ಕೂಡ ಮಂಗಳೂರು ಜಿಲ್ಲೆಯಲ್ಲಿರುವ ಸೂಳ್ಯ ಭಾಗಕ್ಕೆ ಹೋಗಿ ಬಂದಿದ್ದೀರಿ. ಆದ್ದರಿಂದ, ನಾನು ಈ ಸಂದರ್ಭದಲ್ಲಿ ಕೇಳುವುದೇನೆಂದರೆ, ತಾವು ಅಲ್ಲಿಗೆ ಹೋಗಿ ಬಂದಮೇಲೆ ಅಲ್ಲಿ ಏನು ಪರಿಣಾಮವಾಗಿದೆ ಎನ್ನತಕ್ಕಂಥದ್ದನ್ನು ಮತ್ತು ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಕೇಂದ್ರಗಳಲ್ಲಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥದ್ದನ್ನು ತಿಳಿಸಬೇಕು. ಮತ್ತೆ ಪರ್ಟಿಕ್ಯುಲರ್ ಆಗಿ ಶ್ರೀನಿವಾಸಪುರ ತಾಲ್ಲೂಕಿನ ಒಂದೇ ಗ್ರಾಮದಲ್ಲಿ ಸುಮಾರು ಸಾವಿರಾರು ಸಂಖ್ಯೆಯಲ್ಲಿ ಅಲ್ಲಿನ ಜನರಿಗೆ ಈ ಜ್ವರ ಬರುವುದಕ್ಕೆ ಕಾರಣ ಏನು? ಇದರ ಬಗ್ಗೆ ಮೊದಲೇ ಏಕೆ ಪ್ರಿಕಾಷನ್ ತೆಗೆದುಕೊಳ್ಳಲಿಲ್ಲ? ಈ ಎಲ್ಲಾ ಪ್ರಶ್ನೆಗಳಿಗೆ ಸರ್ಕಾರದ ನಿಲುವು ಏನು ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಬೇಕು.

**ಶ್ರೀ ಕಾಗೋಡು ತಿಮ್ಮಪ್ಪ** : ಮಾನ್ಯ ಅಧ್ಯಕ್ಷರೆ, ಈ ವರ್ಷ ನಮಗೆ ಬಂದ ವರದಿ ಪ್ರಕಾರ ಡೆಂಗ್ಯೂ ಜ್ವರದಿಂದ ನಾಲ್ಕು ಜನ ಸತ್ತಿದ್ದಾರೆ. ಮತ್ತೆ ಸೂಳ್ಯ ತಾಲ್ಲೂಕಿನಲ್ಲಿ ಈ ಜ್ವರದಿಂದ ಮತ್ತೊಬ್ಬರು

ಸತ್ತಿದ್ದಾರೆಂದು ವರದಿ ಬಂದಿದೆ. ಆದರೆ, ಈಗ ನಾನು ನೀಡಿರತಕ್ಕಂಥ ಮಾಹಿತಿಯಲ್ಲಿ ಇದು ಸೇರಿಲ್ಲ. ಇದನ್ನು ಖಚಿತ ಪಡಿಸಿಕೊಳ್ಳಬೇಕಾಗಿರತಕ್ಕಂಥ ಸನ್ನಿವೇಶ ಇದೆ. ಇದಕ್ಕೆ ಸಂಬಂಧಪಟ್ಟಂತೆ ವಿವರವಾದ ಮಾಹಿತಿಯನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ಬೆಂಗಳೂರು ನಗರ ಮತ್ತು ಶ್ರೀನಿವಾಸಪುರ ತಾಲ್ಲೂಕಿನ ಹೆಚ್ಚಿನ ಭಾಗದಲ್ಲಿ ಈ ಒಂದು ಪ್ರಕರಣಗಳು ಇವತ್ತಿನದಿವಸ ಬೆಳಕಿಗೆ ಬಂದಿವೆ. ಇದು ರಕ್ತ ಪರೀಕ್ಷೆಯಿಂದ ತಿಳಿದು ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಎರಡು ಮುಖ್ಯವಾದ ಪ್ರಶ್ನೆಗಳೇನೆಂದರೆ, ಇವತ್ತಿನ ದಿವಸ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ನಾವೇನು ಕಾರ್ಯಗತ ಮಾಡಿದ್ದದೇವೆ, ಇಂಥ ಪ್ರದೇಶಗಳಲ್ಲಿ ಬೇಸಿಗೆ ಕಾಲದಲ್ಲಿ ಚರಂಡಿಗಳಲ್ಲಿ ಸರಿಯಾದ ರೀತಿಯಲ್ಲಿ ನೀರು ಹರಿದು ಹೋಗದೇ ಇರುವುದರಿಂದ ಮತ್ತು ಆ ನೀರು ಅಲ್ಲಿಯೇ ನಿಂತುಕೊಳ್ಳುವುದರಿಂದ ಈ ಸೊಳ್ಳೆಗಳು ಉತ್ಪತ್ತಿಯಾಗುವುದಕ್ಕೆ ಅವಕಾಶವಾಗಿದೆ. ಇದನ್ನು ಬೆಂಗಳೂರು ಗ್ರಾಮಾಂತರ ಪ್ರದೇಶದ ಅನೇಕ ಹಳ್ಳಿಗಳಲ್ಲಿ ನಾನು ನೋಡಿದ್ದೇನೆ. ದೊಡ್ಡ ಪ್ರಮಾಣದಲ್ಲಿ ಮಳೆ ಬಂದರೆ ಈ ರೀತಿ ಆಗುವುದಿಲ್ಲ. ಆದ್ದರಿಂದ ಇವೆಲ್ಲವನ್ನೂ ನಾವು ಗುರುತಿಸಿ ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳನ್ನು ಸರಬರಾಜು ಮಾಡಿದ್ದೇವೆ. ಮತ್ತೆ ಎಲ್ಲಿ ಇದು ವ್ಯಾಪಕವಾಗಿ ಕಂಡು ಬಂದಿದೆ ಅಂಥ ಕಡೆ ಹೆಚ್ಚು ಸ್ಪೇ ಮಾಡತಕ್ಕಂಥ ವ್ಯವಸ್ಥೆ ಕೂಡ ಮಾಡಿದ್ದೇವೆ. ಇದು ಪುನಃ ವಿಸ್ತರಿಸದೇ ಇರತಕ್ಕಂಥ ರೀತಿಯಲ್ಲಿ ಇದನ್ನು ತಡೆಗಟ್ಟುವ ರೀತಿಯಲ್ಲಿ ಈಗಾಗಲೇ ಕೆಲಸವಾಗಿದೆ. ಮತ್ತೆ ತಾವು ಈಗಾಗಲೇ ಹೇಳಿರತಕ್ಕಂಥ ಸಲಹೆಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತ ಕ್ರಮವಾಗಿ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ ಅಂಥ ಕಡೆ ತಾವು ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ನಮ್ಮ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸುತ್ತೋಲೆಯನ್ನು ಕಳುಹಿಸಿದ್ದೇನೆ. ವಿಶೇಷವಾಗಿ ಇವತ್ತಿನ ದಿವಸ ನಗರಸಭೆಯ ಆರೋಗ್ಯ ಇಲಾಖೆಯ ಉಸ್ತುವಾರಿ ಮೇಲ್ವಿಚಾರಕರು ಮತ್ತು ಗ್ರಾಮಪಂಚಾಯತಿಯವರು ಇವರ ಬಗ್ಗೆ ಸ್ವಲ್ಪ ಆಸಕ್ತಿ ವಹಿಸಿದರೆ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಈ ಒಂದು ದೃಷ್ಟಿಯಿಂದ ಅವರ ಒಂದು ಸಹಕಾರವನ್ನು ಪಡೆದುಕೊಂಡು ಇದನ್ನು ನಿಯಂತ್ರಣ ಮಾಡುವುದಕ್ಕೆ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಸೂಕ್ತವಾದ ಆದೇಶವನ್ನು ನಾವು ಈಗಾಗಲೇ ಕೊಟ್ಟಿದ್ದೇವೆ.

**ಶ್ರೀ ಎಸ್. ಸುರೇಶ್ ಕುಮಾರ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ವಿಷಯ ಕುರಿತು ಬೆಂಗಳೂರಿನಲ್ಲಿ ಕರೆದಿದ್ದವ ಸಭೆಗೆ ನಾನು ಹೋಗಿದ್ದೆ. ಆದರೆ ಜ್ವರವನ್ನು ಹತೋಟಿಯಲ್ಲಿಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದ ಎನ್ನುವ ಪ್ರಶ್ನೆಗೆ, ಮಾನ್ಯ ಸಚಿವರು ಉತ್ತರವನ್ನು ಡೆಂಗ್ಯೂ ಜ್ವರವು ಹರಡಿರುವ ಪ್ರದೇಶಗಳಲ್ಲಿ ಕೀಟನಾಶಕದ ಧೂಮೀಕರಣ ಕೈಗೊಂಡು ಸೋಂಕು ಹರಡುವ ಸೊಳ್ಳೆಗಳನ್ನು ನಾಶಪಡಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಇದರಲ್ಲಿ ಪ್ರಶ್ನೆ ಏನೆಂದರೆ, ಸೊಳ್ಳೆ ಎಲ್ಲೋ ಕಡಿದಿರುತ್ತದೆ, ಜ್ವರ ಎಲ್ಲೋ ಬರುತ್ತದೆ. ನಮಗೆ ಹಾಗೂ ನಿಮಗೆ ಅಧಿಕಾರಿಗಳು ಹೇಳಿದ ಹಾಗೆ ಡೆಂಗ್ಯೂ ಸೊಳ್ಳೆಗಳು ವಿಶೇಷವಾಗಿ ಹಗಲು ಹೊತ್ತಿನಲ್ಲಿ ಮಾತ್ರ ಕಚ್ಚುತ್ತವೆ, ಅವು ರಾತ್ರಿ ಕಚ್ಚುವುದಿಲ್ಲ. ಹಗಲಿನಲ್ಲಿ ಕಛೇರಿಗೋ ಅಥವಾ ಬೇರೆ ಕಡೆ ಕೆಲಸಕ್ಕೋ ಹೋದಾಗ ಅದು ಕಚ್ಚಿರುತ್ತದೆ. ಜ್ವರ ಬಂದ ಪ್ರದೇಶಗಳಲ್ಲಿ ಸೊಳ್ಳೆ ನಾಶ ಮಾಡುವುದು ಅಷ್ಟು ಉಪಯೋಗವಾಗುವುದಿಲ್ಲ. ಡೆಂಗ್ಯೂ ಜ್ವರದ ಗಂಭೀರವಾದ ಸ್ವರೂಪವನ್ನು ನಾವು ನಮ್ಮ ಜನರಿಗೆ ತಿಳಿಸುವುದರಲ್ಲಿ ವಿಫಲರಾಗಿದ್ದೇವೆ. ಅದು ಯಾವ ರೀತಿಯಾಗಿ ಮಾರಕವಾಗುತ್ತದೆ ಅಂದರೆ It will become fatal ಇದನ್ನು ನಾವು

ಜನರಿಗೆ ತಿಳಿಸಬೇಕು. ನೀವು ಮಿನಿವಾಟರ್ ಟ್ಯಾಂಕ್ ಬಗ್ಗೆ ಹೇಳಿದಿರಿ, ಇವತ್ತು ಎಷ್ಟೋ ಕಿರು ನೀರು ಯೋಜನೆಯಲ್ಲಿ ಮಾಡಲಾದ ಟ್ಯಾಂಕ್‌ಗಳನ್ನು ತೊಳೆಯುವುದಿಲ್ಲ. ಅದನ್ನು ತೊಳೆಯದೆ ಇರುವುದರಿಂದ ಅಲ್ಲಿ ಇವತ್ತು ಸೊಳ್ಳೆ ಉತ್ಪತ್ತಿಯಾಗುವುದಕ್ಕಾಗುತ್ತಿದೆ. ಖಾಸಗಿ ಮನೆಗಳಲ್ಲಿ ಇರುವ ಸಂಪು ಮತ್ತು ಟ್ಯಾಂಕುಗಳು, ಎಳನೀರಿನ ಚಿಪ್ಪೆ ಇವೆಲ್ಲದರಲ್ಲಿ ನೀರು ತುಂಬಿಕೊಳ್ಳುತ್ತಿರುವುದರಿಂದ ಡೆಂಗ್ಯೂ ಜ್ವರಕ್ಕೆ ಕಾರಣವಾಗುತ್ತಿದೆ. ಆದ್ದರಿಂದ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಸರ್ಕಾರ ಈ ಕುರಿತು ಬಹಳ ಗಂಭೀರ ಸ್ವರೂಪದಲ್ಲಿ ಯುದ್ಧೋ ಪಾದಿಯಲ್ಲಿ ಇದರ ವಿರುದ್ಧವಾಗಿ ಒಂದು ಸಮರವನ್ನು ಮಾಡಬೇಕು. ಈ ದಿಸೆಯಲ್ಲಿ ಸರ್ಕಾರ ಏನು ಕ್ರಮವನ್ನು ಕೈಗೊಂಡಿರುತ್ತದೆ?

**ಶ್ರೀ ಕಾಗೋಡು ತಿಮ್ಮಪ್ಪ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಕಳೆದ ವರ್ಷವೂ ಕೂಡ ಡೆಂಗ್ಯೂ ಜ್ವರವು ಬಂದಂಥ ಸಂದರ್ಭದಲ್ಲಿ ನಮ್ಮ ನಗರ ಪಾಲಿಕೆಯ ವತಿಯಿಂದ ವ್ಯಾಪಕವಾದಂಥ ಕಾರ್ಯಕ್ರಮವನ್ನು ಹಮ್ಮಿಕೊಂಡು ಪ್ರಚಾರವು ಬಂತು, ಸಾಹಿತ್ಯ ಒದಗಿಸಿಕೊಟ್ಟಂಥದ್ದು ಬಂತು, ತಿಳುವಳಿಕೆ ನೀಡುವಂಥದ್ದು ಬಂತು ಮನೆಮನೆಗೆ ಜನರನ್ನು ಕಳುಹಿಸಿ ತಿಳುವಳಿಕೆ ನೀಡಿ ನಿಯಂತ್ರಣ ಮಾಡುವ ಬಗ್ಗೆ ಕೆಲಸವನ್ನು ಮಾಡಿರುತ್ತೇವೆ. ಇವತ್ತೂ ಕೂಡ ಮಾನ್ಯ ಶಾಸಕರ ಜೊತೆಯಲ್ಲಿ ಸಮಾಲೋಚನೆಯ ಸಲುವಾಗಿ ಒಂದು ಸಭೆಯನ್ನು ಕರೆದಿರುತ್ತೇವೆ. ಆ ಹಿನ್ನೆಲೆಯಲ್ಲಿ ಈ ಬೆಂಗಳೂರು ನಗರದಲ್ಲಿ ಸುಮಾರು 500 ಜನ ಕಾರ್ಯಕರ್ತರನ್ನು ನೇಮಿಸಿಕೊಂಡು ಎಲ್ಲೆಲ್ಲಿ ಈ ಡೆಂಗ್ಯೂ ಜ್ವರವನ್ನು ಗುರುತಿಸಿದ್ದೇವೆ, ಅಂತಹ ಪ್ರದೇಶಗಳಲ್ಲಿ ಮನೆಮನೆಗೆ ಹೋಗಿ ತಿಳುವಳಿಕೆ ಹೇಳುವ ಕೆಲಸವನ್ನು ಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ನಾವು ಈಗಾಗಲೇ ಹಮ್ಮಿಕೊಂಡಿದ್ದೇವೆ, ಅದರ ಕೆಲಸ ಈಗ ಪ್ರಾರಂಭವಾಗಿದೆ. ಜೊತೆಜೊತೆಗೆ ಸ್ಪ್ರೇ ಮಾಡುವಂಥ ಕೆಲಸವು ನಡೆದಿದೆ. ತಾವು ಹೇಳಿದ ರೀತಿಯಲ್ಲಿ ಜನರಿಗೆ ತಿಳುವಳಿಕೆ ಹೇಳುವುದರಲ್ಲಿ ಈ ಡೆಂಗ್ಯೂ ಜ್ವರ ಸೊಳ್ಳೆ ಹೇಗೆ ಹುಟ್ಟುತ್ತದೆ, ಏನು ಮಾಡುತ್ತದೆ ಎನ್ನುವುದರ ಬಗ್ಗೆ ತೆಂಗಿನಕಾಯಿ ಚಿಪ್ಪಿನಲ್ಲಿ ಹುಟ್ಟುತ್ತದೋ ಇದರ ಎಲ್ಲಾದ್ದರ ಬಗ್ಗೆ ಮಾಹಿತಿ ಇರುವ ಕರಪತ್ರದ ಮೂಲಕ ಹಂಚಿ ತಿಳಿಸಲಾಗಿದೆ, ಮತ್ತು ಮನೆಮನೆಗೆ ಹೋಗಿ ತಿಳಿಸತಕ್ಕಂಥ ವಿಚಾರವೇ ಡೆಂಗ್ಯೂಜ್ವರದ ಸೊಳ್ಳೆ ಎಲ್ಲಿ ಯಾವ ರೀತಿ ಹುಟ್ಟುತ್ತದೆ, ಯಾವ ರೀತಿಯಾದ ಮುಂಜಾಗ್ರತಾ ಕ್ರಮವನ್ನು ನಾವು ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಜನರಿಗೆ ತಿಳಿಸಿ ಹೇಳುವುದು ಮುಖ್ಯವಾಗಿರುತ್ತದೆ.

**ಶ್ರೀ ಎ. ರಾಮದಾಸ್** : ಮಾನ್ಯ ಅಧ್ಯಕ್ಷರೆ, ಮೈಸೂರು ಮಹಾನಗರದಲ್ಲಿ ವಿಶೇಷವಾಗಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಮೂರು ದಿವಸಗಳ ಹಿಂದೆ ಡೆಂಗ್ಯೂ ಜ್ವರದಲ್ಲಿ ಆದಂಥ ಸಮಸ್ಯೆ ಇಡೀ ನಗರದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ತಾವು ಹೇಳಿದ ಹಾಗೆ ನಮ್ಮಲ್ಲಿ ಸಮಸ್ಯೆ ಏನಾಗಿದೆ ಎಂದರೆ, ಸೂಯೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಕೂಡ ಅಲ್ಲಿಯೇ ಇದೆ, ಅದರ ಜೊತೆಯಲ್ಲಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ನಲ್ಲಿ ಸಾಲಿಡ್‌ವೇಸ್ಟ್‌ಗಳನ್ನು ಕೂಡ ಪಿಟ್ಸ್ ಮಾಡುವಂಥ ಪ್ರದೇಶವು ಅಲ್ಲಿಯೇ ಇದೆ. ಅದರ ಸುತ್ತಲೂ ಇರುವಂಥ ಪ್ರದೇಶದಲ್ಲಿ ಈ ಜ್ವರವು ಕಾಣಿಸಿಕೊಂಡು ಕಳೆದ 4 ದಿವಸಗಳಿಂದ ಇಡೀ ನಗರದಲ್ಲಿ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಆದರೆ ಸನ್ಮಾನ್ಯ ಸಚಿವರು ನಗರಪಾಲಿಕೆಯಲ್ಲಿ ಆರೋಗ್ಯದ ವ್ಯವಸ್ಥೆ ಎಂದು ಹೇಳಿ ಒಬ್ಬ ಹೆಲ್ತ್ ಆಫೀಸರ್ ಇರಬಹುದು. ಆದರೆ ಇದಕ್ಕೆ ಬೇಕಾಗಿರತಕ್ಕಂಥ ಸಂಪೂರ್ಣವಾಗಿ ಯುದ್ಧೋಪಾದಿಯಲ್ಲಿ ವ್ಯವಸ್ಥೆಗಳನ್ನು ಇಟ್ಟುಕೊಂಡು ಕ್ರಿಮಿನಾಶಕವನ್ನು ಸಿಂಪಡಿಸಿ ಮಾಡಿ ಎರಾಡಿಕೇಶನ್ ಮಾಡುವಂಥ

ದಿಸೆಯಲ್ಲಿ ಪ್ರಿಕಾಶನ್ ತೆಗೆದುಕೊಳ್ಳುವಂಥ ವ್ಯವಸ್ಥೇ ನಮ್ಮಲ್ಲಿ ಇಲ್ಲ. ತಾವು ಹೇಳಿದ ರೀತಿಯಲ್ಲಿ ಮೈಸೂರು ನಗರದಲ್ಲಿ ಸುಮಾರು 24 ಜನರಿಗೆ ಕಾಯಿಲೆ ಬಂದಿದೆ. ನಗರ ಪ್ರದೇಶದಲ್ಲಿ ಕಾಣಿಸಿಕೊಂಡಿರುವ ಬಗ್ಗೆ ಈಗ ಎರಡು ವಿಚಾರಗಳು ಇವೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಹಾಗೆ ನಗರಪಾಲಿಕೆಯ ಒಂದು ಭಾಗದಲ್ಲಿ ಆರೋಗ್ಯ ಇಲಾಖೆ ಎಂದು ಇದೆ, ನಗರ ಪ್ರದೇಶಗಳಲ್ಲಿ ಮೇಜರ್ ಆಗಿ ಇಂತಹ ಸಮಸ್ಯೆಗಳು ಇರುವಲ್ಲಿ ಸ್ಟೂಯೇಜ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳು ಇರುವಂಥ ಪ್ರದೇಶಗಳಲ್ಲಿ ಅಲ್ಲಿ ಇದನ್ನು ಕಂಟ್ರೋಲ್ ಮಾಡುವಂಥದ್ದಕ್ಕೆ ತಾವು ಯಾವ ರೀತಿಯಾದ ಒಂದು ಕಾಶನ್ಸ್ ತೆಗೆದುಕೊಂಡಿದ್ದೀರಿ ತಾವು ಯಾವ ರೀತಿಯಾದ ಒಂದು ಆದೇಶವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದೀರಿ ಇದರ ಬಗ್ಗೆ ಏನು ಅರೇಜ್‌ಮೆಂಟ್ ಆಗಿದೆ ಎಂದು ಹೇಳಿದರೆ ಆ ದೃಷ್ಟಿಯಲ್ಲಿ ನಗರದವರಿಗೂ ಒಂದು ನಾಲೆಜ್ ಸಿಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ** : ಆರೋಗ್ಯ ಇಲಾಖೆಯ ಮೇಲ್ವಿಚಾರಣೆಯಲ್ಲಿ ಈ ನಗರ ಪ್ರದೇಶ ಅಥವಾ ಸ್ಥಳೀಯ ಸಂಸ್ಥೆಗಳ ಸಹಕಾರವನ್ನು ಪಡೆದುಕೊಂಡು ಕೆಲಸವನ್ನು ಮಾಡುತ್ತವೆ. ಕರಪತ್ರಗಳಾಗಲಿ ಮಾಹಿತಿಯನ್ನು ತಿಳಿಸುವಂಥಾದ್ದಾಗಲಿ ಆರೋಗ್ಯ ಇಲಾಖೆಯ ಮುಖಾಂತರವೇ ಈ ಕೆಲಸವನ್ನು ಮಾಡಲಾಗುತ್ತದೆ. ಈ ಸೂಚನೆಯನ್ನು ಎಲ್ಲಾ ಕಡೆ ಕೊಟ್ಟಿದ್ದೇವೆ. ಆರೋಗ್ಯ ಇಲಾಖೆಯ ಮೇಲ್ವಿಚಾರಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಈ ಕಾರ್ಯಕ್ರಮವನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಶಿವಾನಂದ ಎಸ್ ಪಾಟೀಲ್** : ಮಾನ್ಯ ಅಧ್ಯಕ್ಷರೆ, ಬಯೋಲಾಜಿಕಲ್ ಕಂಟ್ರೋಲ್ ಅನ್ನು ತಮಿಳುನಾಡಿನಲ್ಲಿ ಮಾಡಿರುವ ಬಗ್ಗೆ ಒಂದು ಆರ್ಟಿಕಲ್ ಬಂದಿತ್ತು. ಅದು ತಮ್ಮ ಗಮನಕ್ಕೆ ಬಂದಿದೆಯೇ? ಮಾಸ್ಕಿಟೋಸ್ ಬಯೋಲಾಜಿಕಲ್ ಕಂಟ್ರೋಲ್ ಮಾಡುವ ವಿಚಾರದಲ್ಲಿ ನಾನು ಓದಿರುತ್ತೇನೆ, ಅದರ ಪೇಪರ್ ಕಟಿಂಗ್ ನನ್ನ ಹತ್ತಿರ ಇದೆ. ಅದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

**ಅಧ್ಯಕ್ಷರು** : ಕಳುಹಿಸಿಕೊಡಿ.

**ಶ್ರೀ ಕಾಗೋಡು ತಿಮ್ಮಪ್ಪ** : ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಗಮನಿಸಿ ಪರಿಶೀಲನೆ ಮಾಡಿಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಅಧ್ಯಕ್ಷರೆ, ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಂದು ಗ್ರಾಮಕ್ಕೆ ಭೇಟಿಯನ್ನು ಕೊಟ್ಟಿದ್ದೇನೆ. ಡೆಂಗ್ಯೂ ಜ್ವರ ಪೀಡಿತವಾದ ಪ್ರದೇಶಕ್ಕೆ ನನ್ನ ಜೊತೆಯಲ್ಲಿ ಡಿಹೆಚ್‌ಓ ಕೂಡ ಬಂದಿದ್ದರು. ಅಲ್ಲಿ ಪ್ರಚಾರದ ಕೊರತೆ ಇದೆ. ಅವೇರ್‌ನೆಸ್ ಕ್ರಿಯೇಟ್ ಮಾಡುವಂಥಾದ್ದಾಗಬೇಕಾಗಿದೆ. ಪಕ್ಕದ ಗ್ರಾಮದಲ್ಲಿ 8–10 ಜನ ಡೆಂಗ್ಯೂ ಜ್ವರದಿಂದ ಪೀಡಿತರಾಗಿದ್ದರೆ ಡಿಹೆಚ್‌ಓ ಅಥವಾ ಅಲ್ಲಿರತಕ್ಕಂಥ ಹೆಲ್ತ್ ಆಫೀಸರ್‌ಗೆ ಗೊತ್ತಿರಲಿಲ್ಲ. ನಾನು ಬರುತ್ತೇನೆಂದು ಗೊತ್ತಾಗಿ ಪಕ್ಕದ ಗ್ರಾಮದ ಅವರ ಸಂಬಂಧಿಕರು ಬಂದು, ನಮ್ಮಲ್ಲಿ ಈ ಡೆಂಗ್ಯೂಜ್ವರ ಇದೆ ಎಂದು ಹೇಳಿದರು. ನಿಮ್ಮ ಡಿಹೆಚ್‌ಓ ಅವರು ವಾಲಂಟರಿಯಾಗಿ ಡಯಾಗ್ನೈಸ್ ಅಥವಾ ಐಡೆಂಟಿಫೈ ಮಾಡುವಂಥದ್ದಾಗಬೇಕು. ಅದು ಆಗಬೇಕು, ಅಲ್ಲಿ ಅದು ಆಗುತ್ತಿಲ್ಲ. ಹೀಗಾಗಿ ಇದರ ಬಗ್ಗೆ ಡಿಹೆಚ್‌ಓಗಳನ್ನು ಹೆಲ್ತ್ ಆಫೀಸರ್‌ಗಳ ಒಂದು ಪ್ರತ್ಯೇಕವಾದ ಸಭೆಯನ್ನು ಕರೆದು ಅವರಿಗೆ ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್ ಕೊಟ್ಟರೆ ಹೆಚ್ಚು ಸ್ಪೆಡ್ ಆಗುವುದಕ್ಕೆ ಸಾಧ್ಯವಿಲ್ಲ. ಅವೇರ್‌ನೆಸ್ ಕ್ರಿಯೇಟ್ ಮಾಡುವುದಿಲ್ಲ. ಹೀಗಾಗಿ ಅದರಲ್ಲಿ ಕೊರತೆಯಾಗುತ್ತಿದೆ. ಅದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎನ್ನುವುದರ ಬಗ್ಗೆ ಹೇಳಬೇಕಾಗುತ್ತದೆ.

**ಶ್ರೀ ಬಿ. ಸೋಮಶೇಖರ್** : ಮಾನ್ಯ ಅಧ್ಯಕ್ಷರೆ, ನಾನು ಇದೇ ವಿಚಾರವನ್ನು ಹೋದವಾರ ಶೂನ್ಯವೇಳೆಯಲ್ಲಿ ಚರ್ಚೆಗೆ ಎತ್ತಿದ್ದೆ, ಆಗ ಮಾನ್ಯ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಏನೇನು ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡಿರುತ್ತೇವೆ ಅದರ ಬಗ್ಗೆ ಸದನದಲ್ಲಿ ಹೇಳುತ್ತೇನೆ ಎಂದು ಹೇಳಿದ್ದರು. ಮಂಡ್ಯದಲ್ಲಿ ಒಂದು ಶಾಲಾ ಮಗು ಸತ್ತಿರುವ ಬಗ್ಗೆ ತಮ್ಮ ಗಮನಕ್ಕೆ ತಂದಿರುತ್ತೇನೆ. ರಾಜ್ಯದಲ್ಲಿ ಎಷ್ಟು ಸೋಂಕು ಇದೆ, ಅದರ ಅರ್ಧಭಾಗ ಕೋಲಾರ ಜಿಲ್ಲೆಯಲ್ಲಿ ಸೋಂಕು ತಗುಲಿದ ಬಗ್ಗೆ ಹೇಳಿದ್ದೇನೆ. ಯಾವುದೇ ಜ್ವರ ಬಂದರೂ ಕೂಡ ಡೆಂಗ್ಯೂ ಜ್ವರ ಎಂದು ಎಲ್ಲರಿಗೂ ಭಯ ಬರುತ್ತದೆ. ಆದ್ದರಿಂದ ತಪಾಸಣೆಯನ್ನು ಎಲ್ಲಾ ಶಾಲಾ ಮಕ್ಕಳಿಗೆ ಯುದ್ಧೋಪಾದಿಯಲ್ಲಿ ಮಾಡಿಸಿ. ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ಕೆಲವು ಕಡೆ ಔಷಧಿಗಳು ಇಲ್ಲವೆಂದು ಹೇಳುತ್ತಿದ್ದಾರೆ. ಸರಿಯಾಗಿ ಡಾಕ್ಟರ್‌ಗಳು ಇಲ್ಲ, ಸುಮಾರು ಎರಡು-ಮೂರು ತಿಂಗಳುಗಳಿಂದ ಈ ಡೆಂಗ್ಯೂ ಜ್ವರ ಕಡಿಮೆಯಾಗುತ್ತಲೇ ಇಲ್ಲ. ಅದರ ಬಗ್ಗೆ ಸರ್ಕಾರ ಏನೇನು ಕ್ರಮವನ್ನು ಕೈಗೊಂಡಿದೆ, ಮುಂಜಾಗ್ರತೆ ಕ್ರಮ ಏನು? ಔಷಧಿಯನ್ನು ಒದಗಿಸಿಕೊಟ್ಟಿದ್ದೀರ? ಎಷ್ಟು ಪ್ರಕರಣಗಳು ದಾಖಲಾತಿಯಾಗಿವೆ ಎನ್ನುವುದರ ಬಗ್ಗೆ ತಾವು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು.

**ಶ್ರೀ ಕಾಗೋಡು ತಿಮ್ಮಪ್ಪ** : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಡೆಂಗ್ಯೂ ಜ್ವರದ ಬಗ್ಗೆ ಮಾನ್ಯ ಸೋಮಶೇಖರ್‌ರವರು ಪ್ರಸ್ತಾಪ ಮಾಡಿದ್ದಾರೆ, ಮೇಲ್ಮನೆಯಲ್ಲಿ ಕೂಡ ಚರ್ಚೆಯಾದ ಮೇಲೆಯೇ ನಾನು ಸುಮಾರು 15-20 ದಿವಸಗಳ ಹಿಂದೆ ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ಚರ್ಚೆಯನ್ನು ಮಾಡಿ ಅವರಿಗೆ ಎಲ್ಲಾ ವಿವರಗಳನ್ನು ಕೊಟ್ಟು ಅವರು ಏನು ಮಾಡಬೇಕು ಎನ್ನುವುದರ ಬಗ್ಗೆ ತಿಳಿಸಿ ಕಳುಹಿಸಲಾಗಿದೆ. ಮೊನ್ನೆ ನಾನು ಇದರ ಬಗ್ಗೆ ಒಂದು ಹೇಳಿಕೆಯನ್ನೂ ಕೂಡ ಮಾಡಬೇಕೆಂದು ಪ್ರಸ್ತಾಪವನ್ನು ಮಾಡಿರುತ್ತೇನೆ. ತಾವು ಇಲ್ಲದಿರುವುದರಿಂದ ನಾನು ಅದನ್ನು ಮಾಡುವುದಕ್ಕಾಗಲಿಲ್ಲ. ಆ ದೃಷ್ಟಿಯಿಂದಾಗಿ ತಮ್ಮ ಭಾವನೆಯ ಪ್ರಕಾರವಾಗಿ ಮುಂಜಾಗ್ರತೆಯ ಕ್ರಮ ಏನೇನು ಕೈಗೊಳ್ಳಬೇಕೋ ಅದೆಲ್ಲವನ್ನು ಮಾಡಿ ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ನಾನು ಇನ್ನೊಂದು ಸಲ ಅವರಿಗೆ ಅಗತ್ಯವಾದ ಮಾಹಿತಿಯನ್ನು ನೀಡುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಅಧ್ಯಕ್ಷರೆ, ಈ ಕಾಯಿಲೆ ವಿಶೇಷವಾಗಿ ಹರಡತಕ್ಕಂಥದ್ದು ಮತ್ತು ಪರಿಹಾರದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿರುವುದು ಇವೆಲ್ಲ ಕ್ಯೂರೇಟೀವ್. ಪ್ರಿವೆಂಟೀವ್ ಆಗಿ ಮಾಡತಕ್ಕಂಥ ಕ್ರಮಗಳು ಬಹಳ ಇವೆ. ನನ್ನ ಗಮನಕ್ಕೆ ಬಂದಿರುವಂಥದ್ದು ಏನೆಂದರೆ, ರಾಜ್ಯದಲ್ಲಿ ವಿಶೇಷವಾಗಿ ಪ್ರಿವೆಂಟೀವ್ ಮೆಡಿಷಿನ್ಸ್ ಏನಿದೆ ಅದನ್ನು ಟೋಟಲ್ ಆಗಿ, ಆ ಡಿಪಾರ್ಟ್‌ಮೆಂಟ್‌ನ್ನು ನಾವು ನೆಗ್ಲೆಕ್ಟ್ ಮಾಡಿದ್ದೇವೆ. ಜಿಲ್ಲಾ ಪಂಚಾಯಿತಿಗೆ ಈ ಆರೋಗ್ಯ ಇಲಾಖೆ ಹೋದಮೇಲೆ ಡಿಹೆಚ್‌ಒ, ಎಡಿಹೆಚ್‌ಒ, ಜಾಯಿಂಟ್ ಡೈರೆಕ್ಟರ್ಸ್ ಇವರಿಗೆ ಈಗ ಏನೂ ಕೆಲಸವಿರುವುದಿಲ್ಲ. ಟೋಟಲ್ ಆಗಿ ಈ ಪ್ರಿವೆಂಟೀವ್ ಆಸ್ಪೆಕ್ಟ್ ನೆಗ್ಲೆಕ್ಟ್ ಆಗಿರುವಂಥದ್ದು ಮಾನ್ಯ ಮಂತ್ರಿಗಳ ಮತ್ತು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಮೋರ್‌ದ್ಯಾನ್ ಕ್ಯೂರೆಟೀವ್ ಆಸ್ಪೆಕ್ಟ್ಸ್ ಪ್ರಿವೆಂಟೀವ್ ಆಸ್ಪೆಕ್ಟ್ಸ್ ಕಡೆ

ಏನು ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ಬಹಳ ಇಂಪಾರ್ಟೆಂಟ್, ನಿಮಗೆ ಗೊತ್ತಿರುವ ಹಾಗೆ ಈಗ ಏನಾಗಿದೆ ಎಂದರೆ, ಆಸ್ಪತ್ರೆ, ಔಷಧಿ, ಅಸಿಸ್ಟೆಂಟ್ ಸರ್ಜನ್, ಜನರಲ್ ಹಾಸ್ಪಿಟಲ್, ಇದಕ್ಕೆ ಸೀಮಿತವಾಗಿ ಇದೆಯೇ ಹೊರತು ಆ ಎಡಿಹೆಚ್, ಆ ಪಾಯಿಂಟ್ ಡೈರೆಕ್ಟರ್ಸ್ ಅವರಿಗೆ ಇರುವ ಗೌರ್ನಮೆಂಟ್ ಆಫ್ ಇಂಡಿಯಾ ಪ್ರೋಗ್ರಾಮ್ಸ್, ಸ್ಟೇಟ್ ಗೌರ್ನಮೆಂಟ್ ಪ್ರೋಗ್ರಾಮ್ಸ್ ಪ್ರಿವೆಂಟೀವ್ ಆಸ್ಪೆಕ್ಟ್ಸ್ ಇವೆಲ್ಲಾ ಟೋಟಲ್ ಆಗಿ ಇಗ್ನೋರ್ ಆಗಿ ಹೋಗಿದೆ. ಹೆಲ್ತ್ ಡಿಪಾರ್ಟ್‌ಮೆಂಟ್ ಅಂದರೆ, ಆಸ್ಪತ್ರೆ, ಅಸಿಸ್ಟೆಂಟ್ ಸರ್ಜನ್, ಟ್ರಾನ್ಸ್‌ಫರ್, ಔಷಧಿಗಳು ಇಷ್ಟೇ ನಿಮ್ಮ ಕೆಲಸವಾಗಿ ಹೋಗಿದೆ. ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ನೀವು ಬಹಳ ಯಶಸ್ವಿಯಾಗಿ ಮಾಡಿದ್ದೀರಿ. I compliment the state Government and the Government of India for this. ಆ ರೀತಿ ಏನಾದರೂ ಈ ಡೆಂಗ್ಯೂಜ್ವರ ಒಂದು ಸಲ ಬಂತು ಅಂದರೆ ಅಲ್ಲಿಗೆ ಕೆಲಸ ಮುಗಿಯಿತು. ಪ್ರಿವೆಂಟೀವ್ ಆಸ್ಪೆಕ್ಟ್ಸ್‌ನಲ್ಲಿ ನೀವು ಏನಾದರೂ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೀರಾ?

**ಶ್ರೀ ಕಾಗೋಡು ತಿಮ್ಮಪ್ಪ** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಸಲಹೆ ಉಪಯುಕ್ತವಾಗಿದೆ, ಆ ದಿಕ್ಕಿನಲ್ಲಿ ಕೆಲಸ ಮಾಡತಕ್ಕಂಥದ್ದು ಅಗತ್ಯ ಕೂಡ ಇದೆ. ಜಿಲ್ಲಾ ಪಂಚಾಯಿತಿ ಬಂದಮೇಲೆ ಅಲ್ಲಿ ಕೂಡ ಆರೋಗ್ಯ ಸಮಿತಿ ಇದೆ. ಅದು ಕ್ರಿಯಾತ್ಮಕವಾಗಿ ಕೆಲಸವನ್ನು ಮಾಡಿದರೆ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ಇವತ್ತು ಪಲ್ಸ್ ಪೋಲೀಯೋ ಕಾರ್ಯಕ್ರಮದ ರೀತಿಯಲ್ಲಿ ನಮ್ಮ ಅನೇಕ ಕಾರ್ಯಕ್ರಮಗಳು ಇವೆ. ಅದು ಡೆಂಗ್ಯೂ ಜ್ವರವಿರಬಹುದು, ಮಲೇರಿಯಾ ಇರಬಹುದು, ಸಾಂಕ್ರಾಮಿಕ ರೋಗಗಳು ಇರಬಹುದು. ಅಥವಾ ಇನ್ನಿತರವು ಇರಬಹುದು. ಇವುಗಳನ್ನು ನಿಯಂತ್ರಿಸಲು ವ್ಯಾಪಕವಾಗಿ ನಾವು ಕೆಲಸ ಮಾಡಬೇಕಾದಂತಹ ಅಗತ್ಯವಿದೆ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಕಾರ್ಯಕ್ರಮವನ್ನು ರೂಪಿಸುತ್ತೇವೆ.

**ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳು**

531 (4713) : ಶ್ರೀ ಗುರುಸ್ವಾಮಿ ಸಿ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಜಿಲ್ಲಾ ಸರ್ಜನ್ ಹುದ್ದೆ ಖಾಲಿ ಇರುವುದು (ಇನ್‌ಚಾರ್ಜಿನಲ್ಲಿರುವುದು) ಹಾಗೂ ಇನ್ನಿತರ ಸಿಬ್ಬಂದಿ ಹುದ್ದೆಗಳು ಖಾಲಿ ಇದ್ದು ರೋಗಿಗಳಿಗೆ ಬಹಳ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಅದನ್ನು ಯಾವಾಗ ಸರಿಪಡಿಸಲಾಗುವುದು;

ಆ) ಸದರಿ ಜಿಲ್ಲಾ ಆಸ್ಪತ್ರೆಗೆ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಿಷನ್ ಒಂದು ವರ್ಷದಿಂದ ಒದಗಿಸಿದ್ದರೂ ಅದನ್ನು ನಿರ್ವಹಿಸುವ ಸಿಬ್ಬಂದಿಯನ್ನು ನೀಡದೆ ಯಂತ್ರ ತಟಸ್ಥವಾಗಿರುವುದು ಹಾಗೂ ಇದರಿಂದ ಬಡ ರೋಗಿಗಳು ಅದರಲ್ಲೂ ಮಹಿಳೆಯರು ಸ್ಕ್ಯಾನಿಂಗ್ ಮಾಡಿಸಲು ಮೈಸೂರಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? ಈ ತೊಂದರೆಯನ್ನು ಯಾವಾಗ ಸರಿಪಡಿಸುವಿರಿ?